ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **334**

ಸದಸ್ಯರ ಹೆಸರು : **ಶ್ರೀ ಎನ್. ರವಿಕುಮಾರ್**

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 06-03-2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಖಾಸಗಿ ಸಾರಿಗೆ ಸಂಸ್ಥೆಯವರು ಕಾರ್ಯ ನಿರ್ವಹಿಸುತ್ತಿದ್ದಾರೆ:	ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ ಖಾಸಗಿ ಸಾರಿಗೆ ಸಂಸ್ಥೆಯವರು ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ-66ರನ್ವಯ ಸಂಬಂಧಪಟ್ಟ ಸಾರಿಗೆ ಪ್ರಾಧಿಕಾರಗಳಿಗೆ ಅರ್ಜಿ ಸಲ್ಲಿಸಿ, ರಹದಾರಿ ಮಂಜೂರಾದ ಮಾರ್ಗಗಳಲ್ಲಿ/ಪ್ರದೇಶಗಳಲ್ಲಿ ಖಾಸಗಿ ಸಾರಿಗೆ ಪ್ರವರ್ತಕರು ಕಾರ್ಯಾಚರಣೆ ಮಾಡುತ್ತಿದ್ದಾರೆ.
ಆ)	ಖಾಸಗಿ ಸಾರಿಗೆ ಸಂಸ್ಥೆಯವರು ಹಬ್ಬದ ದಿನಗಳಂದು ಮತ್ತು ಸರ್ಕಾರಿ ರಜಾ ದಿನಗಳಂದು ಸಂಚರಿಸುವ ಬಸ್ಸುಗಳ ಟಿಕೇಟು ದರಗಳನ್ನು ಅತಿ ಹೆಚ್ಚು ಏರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ:	ಖಾಸಗಿ ಸಾರಿಗೆ ಸಂಸ್ಥೆಯವರು ಹಬ್ಬದ ದಿನಗಳಂದು ಮತ್ತು ಸರ್ಕಾರಿ ರಜಾ ದಿನಗಳಂದು ಬಸ್ಸುಗಳ ಟಿಕೇಟು ದರಗಳನ್ನು ಏರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 67(1)(i) ರಲ್ಲಿ ಮಜಲು ವಾಹನಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಅಧಿಸೂಚನೆ ಸಂಖ್ಯೆ:ಸಾರಿಇ 97 ಸಾಇಪ 2013, ದಿನಾಂಕ:31-07-2013ರಲ್ಲಿ ಹಬ್ಬ-ಹರಿದಿನಗಳು, ಜಾತ್ರೆಗಳು ಇತರೆ ಸಂದರ್ಭಗಳಲ್ಲಿ ನಿಗದಿತ ದರಕ್ಕಿಂತ ಒಂದೂವರೆ ಪಟ್ಟು ದರ ವಸೂಲಿ ಮಾಡಲು ಅವಕಾಶವಿರುತ್ತದೆ. ಅನಧಿಕೃತವಾಗಿ ಸಂಚರಿಸುವ ಮತ್ತು ರಹದಾರಿ ನಿಬಂಧನೆಗಳನ್ನು ಉಲ್ಲಂಘಿಸಿ ಸಂಚರಿಸುತ್ತಿರುವ ಖಾಸಗಿ ಬಸ್ಸುಗಳನ್ನು ತೀವ್ರವಾಗಿ ತಪಾಸಣೆ ಮಾಡಲಾಗುತ್ತಿದೆ. ಸದರಿ ತಪಾಸಣಾ ಕಾರ್ಯವು ನಿರಂತರವಾಗಿ ಜಾರಿಯಲ್ಲಿದೆ. ಏಪ್ರಿಲ್-2019 ರಿಂದ ಜನವರಿ-2020 ರವರೆಗೆ ಅನಧಿಕೃತವಾಗಿ ಸಂಚರಿಸುವ ಮತ್ತು ರಹದಾರಿ ನಿಬಂಧನೆಗಳನ್ನು ಉಲ್ಲಂಘಿಸಿ ಸಂಚರಿಸುತ್ತಿದ್ದ ಖಾಸಗಿ ಬಸ್ಸುಗಳ ತನಿಖಾ ಕಾರ್ಯದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.
ಇ	ಕಳೆದ 6 ತಿಂಗಳಿನಲ್ಲಿ ಈ ರೀತಿ ದರ ಏರಿಸಿರುವ ಎಷ್ಟು ಬಸ್ಸುಗಳ ಪರವಾನಿಗೆಯನ್ನು ರದ್ದುಗೊಳಿಸಲಾಗಿದೆ:	2019-20ನೇ ಜನವರಿ ಮಾಹೆಯವರಗೆ ಅನಧಿಕೃತವಾಗಿ ಸಂಚರಿಸುವ ಮತ್ತು ರಹದಾರಿ ನಿಬಂಧನೆಗಳನ್ನು ಉಲ್ಲಂಘಿಸಿ ಸಂಚರಿಸುತ್ತಿದ್ದ ಖಾಸಗಿ ಬಸ್ಸುಗಳ 82 ರಹದಾರಿಗಳನ್ನು ಅಮಾನತ್ತುಗೊಳಿಸಲಾಗಿದೆ.

ಈ	ಸರ್ಕಾರಿ ಬಸ್ಸುಗಳನ್ನು ಲೋಕಲ್ ಸಾರಿಗೆಯ ರೂಪದಲ್ಲಿ ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಬಳಸಲಾಗುತ್ತಿದೆ: ಎಷ್ಟು ಬಸ್ಸುಗಳನ್ನು ಬಳಸಲಾಗುತ್ತಿದೆ: (ಜಿಲ್ಲಾವಾರು ಮಾಹಿತಿ ನೀಡುವುದು)	ಸರ್ಕಾರಿ ಬಸ್ಸುಗಳನ್ನು ಲೋಕಲ್ ಸಾರಿಗೆಯ ರೂಪದಲ್ಲಿ ರಾಜ್ಯದ ಜಿಲ್ಲೆಗಳಲ್ಲಿ ಬಳಸಲಾಗುತ್ತಿರುವ ಬಸ್ಸುಗಳ ವಿವರವನ್ನು **"ಅನುಬಂಧ-2"** ದಲ್ಲಿ ಒದಗಿಸಲಾಗಿದೆ.
ಉ	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮಾರ್ಗಗಳಲ್ಲಿ (Route) ಸರ್ಕಾರಿ ಬಸ್ಸುಗಳನ್ನು ಸಾರ್ವಜನಿಕ ಸಾರಿಗೆಯ ರೂಪದಲ್ಲಿ ಬಳಸಲಾಗುತ್ತಿದೆ: ಎಷ್ಟು ಬಸ್ಸುಗಳನ್ನು ಬಳಸಲಾಗುತ್ತಿದೆ: ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳನ್ನು ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ:	ಕರ್ನಾಟಕ ರಾಜ್ಯ ರಸ್ತೆ ನಿಗಮದ ಮಂಗಳೂರು ಮತ್ತು ಪುತ್ತೂರು ವಿಭಾಗಗಳ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 435 ಮಾರ್ಗಗಳಲ್ಲಿ 415 ಸಾಮಾನ್ಯ ಅನುಸೂಚಿಗಳಿಂದ ಸ್ಥಳೀಯ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳನ್ನು ಒದಗಿಸುವ ಅವಶ್ಯಕತೆ ಕುರಿತು ಪರಿಶೀಲನೆಯಲ್ಲಿರುತ್ತದೆ.

ಟಿಡಿ 12 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಅನುಬಂಧ –1

ಹಬ್ಬದ ಮತ್ತು ಸರ್ಕಾರದ ರಜೆ ದಿನಗಳಂದು ಅತಿಹೆಚ್ಚು ಬಸ್ ಟಿಕೆಟ್ ದರ ಪಡೆದು ಸಂಚರಿಸುವ ಖಾಸಗಿ ವಾಹನಗಳ ವಿರುದ್ಧ ನಡೆಸಿದ ತಪಾಸಣಾ ವಿವರಗಳು ದಿನಾಂಕ: 01–04–2019 ರಿಂದ 31–01–2020 ರ ವರೆಗೆ

ವಾಹನದ ವರ್ಗ	ತಪಾಶಿಸಿದ ವಾಹನಗಳ ಸಂಖ್ಯೆ	ದಾಖಲಿಸಿದ ಪ್ರಕರಣಗಳ ಸಂಖ್ಯೆ	ವಶಪಡಿಸಿದ ವಾಹನಗಳ ಸಂಖ್ಯೆ	ತೆರಿಗೆ	ದಂಡ	ಒಟ್ಟು
ಒಪ್ಪಂದ ವಾಹನ	215	81	0	399600	41000	440600
ಮಜಲು ವಾಹನ	40	6	0	0	0	0
ಅಖಿಲ ಭಾರತ ಪ್ರವಾಸಿ ವಾಜನ	325	76	0	99900	33700	133600
ಒಟ್ಟು	**580**	**163**	**0**	**499500**	**74700**	**574200**

"ಅನುಬಂಧ-2"

ಕ್ರ. ಸಂ.	ಜಿಲ್ಲೆ	ಸಾಮಾನ್ಯ ಸಾರಿಗೆ ಬಸ್ಸುಗಳ ಸಂಖ್ಯೆ
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ		
1	ಬೆಂಗಳೂರು ನಗರ	60
2	ಬೆಂಗಳೂರು ಗ್ರಾಮಾಂತರ	87
3	ರಾಮನಗರ	210
4	ತುಮಕೂರು	314
5	ಕೋಲಾರ	281
6	ಚಿಕ್ಕಬಳ್ಳಾಪುರ	195
7	ಮೈಸೂರು	712
8	ಮಂಡ್ಯ	236
9	ಹಾಸನ	334
10	ಚಿಕ್ಕಮಗಳೂರು	112
11	ದಕ್ಷಿಣಕನ್ನಡ	415
12	ಉಡುಪಿ	67
13	ಕೊಡಗು	33
14	ದಾವಣಗೆರೆ	177
15	ಶಿವಮೊಗ್ಗ	166
16	ಚಿತ್ರದುರ್ಗ	131
17	ಚಾಮರಾಜನಗರ	121
	ಒಟ್ಟು	**3651**
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ		
18	ಬೆಂಗಳೂರು ನಗರ	5963
19	ಬೆಂಗಳೂರು ಗ್ರಾಮಾಂತರ	125
20	ರಾಮನಗರ	69
	ಒಟ್ಟು	**6157**
ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ		
21	ಧಾರವಾಡ	181
22	ಬೆಳಗಾವಿ	536
23	ಬಾಗಲಕೋಟೆ	257
24	ಗದಗ	239
25	ಹಾವೇರಿ	238
26	ಉತ್ತರ ಕನ್ನಡ (ಕಾರವಾರ)	180
	ಒಟ್ಟು	**1731**
ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ		
27	ಕಲಬುರಗಿ	492
28	ಬೀದರ	282
29	ಯಾದಗೀರ	161
30	ರಾಯಚೂರು	254
31	ಬಳ್ಳಾರಿ	367
32	ಕೊಪ್ಪಳ	170
33	ವಿಜಯಪುರ	402
	ಒಟ್ಟು	**2128**
ಒಟ್ಟಾರೆ (ನಾಲ್ಕೂ ಸಾರಿಗೆ ಸಂಸ್ಥೆಗಳು)		**13667**